<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.134/2022</u>

ದಿಃ 05.10.2023

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-3 Pw-2

| | | |
|---|---|---|
| ಹೆಸರು | ಃ | ಗೋವಿಂದ ನಾಯಕ |
| ತಂದೆಯ ಹೆಸರು | ಃ | ಸಕ್ರಿಯ ನಾಯಕ |
| ವಯಸ್ಸು | ಃ | 55 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸಸ್ಥಳ | ಃ | ವಿರೂಪಸಂದ್ರ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಚಾಸಾ.1, 2 ಮತ್ತು 4ರಿಂದ 6 ನನಗೆ ಗೊತ್ತು.

2. ಚಾಸಾ 2 ಈತನ ಮನೆ ಮತ್ತು ನಮ್ಮ ಮನೆ ಒಂದೇ ಬೀದಿಯಲ್ಲಿ ಸ್ವಲ್ಪ ಅಂತರದಲ್ಲಿ ಇರುತ್ತದೆ.

3. ಚಾಸಾ 1 ಮತ್ತು 2 ಇವರು ಹಿಂದೂ ಲಂಬಾಣಿ ಜಾತಿಗೆ ಸೇರಿದವನಾಗಿರುತ್ತಾರೆ.

4. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಗೌಡ ಸಮುದಾಯಕ್ಕೆ ಸೇರಿದವರಾಗಿದ್ದು, ನನಗೆ ಗೊತ್ತು.

5. ಆರೋಪಿತರಿಗೆ ಚಾಸಾ 1 ಮತ್ತು ಚಾಸಾ 2 ಇವರ ಜಾತಿ ಗೊತ್ತು.

6.ಈಗ ಸುಮಾರು ಒಂದೂವರೆ ವರ್ಷದ ಹಿಂದೆ ಒಂದು ದಿನ ರಾತ್ರಿ 9 ಗಂಟೆಯ ಸಮಯದಲ್ಲಿ ನಾನು ನಮ್ಮ ಮನೆಯ ಬಳಿ ಇದ್ದಾಗ ಚಾಸಾ 5 ಇವಳು ಜೋರಾಗಿ ಕಿರುಚುತ್ತಿದ್ದಳು.

7.ಆಗ ನಾನು ಚಾಸಾ 2 ಈತನ ಮನೆಯ ಹತ್ತಿರ ಹೋಗಿ ನೋಡಲಾಗಿ, ಚಾಸಾ 1 ಮತ್ತು 2 ಇವಳು ತಮ್ಮ ಮನೆಯಲ್ಲಿ ಊಟ ಮಾಡುತ್ತಿದ್ದಾಗ ಆರೋಪಿತರು ಅವರ ಮನೆಗೆ ನುಗ್ಗಿ ಜಗಳ ಕಾಯ್ದು ಕೈಯಿಂದ ಹೊಡೆದಿರುತ್ತಾರೆ.

8. ಆರೋಪಿತರು ಹೊಡಿತಿನಿ ಬಡಿತಿನಿ ಅನ್ನುತ್ತಿದ್ದರು.

9.ಸದರಿ ಗಲಾಟೆಯಲ್ಲಿ ಇಷ್ಟನ್ನು ಹೊರತುಪಡಿಸಿ ಬೇರೆ ಏನು ಕೇಳಿಸಿಕೊಂಡಿರುವುದಿಲ್ಲ.

10. ನಾನು ಪೊಲೀಸರು ಮುಂದೆ ಇಷ್ಟನ್ನು ಹೊರತುಪಡಿಸಿ ಬೇರೆ ಏನು ಹೇಳಿರುವುದಿಲ್ಲ.

11.ನಂತರ ಚಾಸಾ 2 ಈತನು ಸಾತನೂರಿಗೆ ಹೋಗಿರುತ್ತಾನೆ.

12. ಸದರಿ ಗಲಾಟೆಯನ್ನು ನಾನು, ಚಾಸಾ 5 ಮತ್ತು ಇತರರು ಕೂಡಿ ಬಿಡಿಸಿರುತ್ತೇವೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

13. ಸದರಿ ಗಲಾಟೆಯಲ್ಲಿ ಆರೋಪಿತರೆಲ್ಲರೂ ಚಾಸಾ 1 ಮತ್ತು 2 ಇವರಿಗೆ ಅವಾಚ್ಯ ಶಬ್ದದಿಂದ ಬೈದಿರುತ್ತಾರೆ ಎಂಬುವುದು ಸರಿ.

14.ಅದೇ ಪ್ರಕಾರ ಆರೋಪಿತರು ಚಾಸಾ 1 ಮತುತ 2 ಇವರಿಗೆ ಸಾಯಿಸದೇ ಬಿಡುವುದಿಲ್ಲ ಎಂದು ಪ್ರಾಣದ ಬೆದರಿಕೆ ಹಾಕಿರುತ್ತಾರೆ ಎಂಬುವುದು ಸರಿ.

15. ಸದರಿ ಆರೋಪಿತರು ಚಾಸಾ 1 ಮತ್ತು 2 ಇವರಿಗೆ ಲಂಬಾಣಿ ಕೀಳು ಜಾತಿಯವರು ಇದ್ದು, ಊರು ಬಿಟ್ಟು ಹೋಗಬೇಕು ಎಂದು ಬೈದು ಅವಮಾನ ಪಡಿಸಿರುತ್ತಾರೆ.

16. ಸದರಿ ಮೇಲೆ ಸೂಚಿಸಿದ ವಿಚಾರವನ್ನು ನಾನು ಪೊಲೀಸರಿಗೆ ತಿಳಿಸಿರುತ್ತೇನೆ ಎಂಬುವುದು ಸರಿ.

<u>ಪಾಟೀ ಸವಾಲುಃ ಶ್ರೀ.ಎಸ್ಎನ್., ವಕೀಲರಿಂದ 1ನೇ ಆರೋಪಿಯ ಪರವಾಗಿಃ</u>

17. ಆರೋಪಿತರು ಮತ್ತು ಚಾಸಾ 1 ಪರಸ್ಪರ ಸ್ನೇಹಿತರು ಎಂಬುವುದು ಸರಿ.

18. ಆ ದಿನ ಅಲ್ಲಿ ಯಾವುದೇ ಗಲಾಟೆ ನಡೆದಿರುವುದಿಲ್ಲ ಎಂಬುವುದು ಸರಿಯಲ್ಲ.

19. ನಾನು ಪೊಲೀಸರ ಮುಂದೆ ಯಾವುದೇ ರೀತಿಯ ಹೇಳಿಕೆಯನ್ನು ನೀಡದೇ ಇದ್ದರೂ ಸಹ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

20.ಚಾಸಾ 2 ಈತನೊಂದಿಗೆ ನಾನು ಆ ದಿನ ರಾತ್ರಿ ಎಲ್ಲಿಯೂ ಹೋಗಿರಲಿಲ್ಲ ಎಂಬುವುದು ಸರಿ .

21.ಚಾಾ 1 ಮತ್ತು 2 ಇವರು ಒದೇ ಬೀದಿಯಲ್ಲಿ ವಾಸ ಮಾಡುತ್ತಿದ್ದುದ್ದರಿಂದ ನನಗೆ ಪರಿಚಯಸ್ಥರು ಎಂದು ಅವರ ಮಾತು ಕೇಳಿ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

22.ಈಗ ಸುಮಾರು ಒಂದೂವರೆ ವರ್ಷದ ಹಿಂದೆ ಒಂದು ದಿನ ರಾತ್ರಿ 9 ಗಂಟೆಯ ಸಮಯದಲ್ಲಿ ನಾನು ನಮ್ಮ ಮನೆಯ ಬಳಿ ಇದ್ದಾಗ ಚಾಸಾ 5 ಇವಳು ಜೋರಾಗಿ ಕಿರುಚುತ್ತಿದ್ದಳು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

23.ಆಗ ನಾನು ಚಾಸಾ 2 ಈತನ ಮನೆಯ ಹತ್ತಿರ ಹೋಗಿ ನೋಡಲಾಗಿ, ಚಾಸಾ 1 ಮತ್ತು 2 ಇವಳು ತಮ್ಮ ಮನೆಯಲ್ಲಿ ಊಟ ಮಾಡುತ್ತಿದ್ದಾಗ ಆರೋಪಿತರು ಅವರ ಮನೆಗೆ ನುಗ್ಗಿ ಜಗಳ ಕಾಯ್ದು

ಕೈಯಿಂದ ಹೊಡೆದಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

24. ಆರೋಪಿತರು ಹೊಡಿತಿನಿ ಬಡಿತಿನಿ ಅನ್ನುತ್ತಿದ್ದರು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

25.ಸದರಿ ಗಲಾಟೆಯಲ್ಲಿ ಇಷ್ಟನ್ನು ಹೊರತುಪಡಿಸಿ ಬೇರೆ ಏನು ಕೇಳಿಸಿಕೊಂಡಿರುವುದಿಲ್ಲ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

26. ನಾನು ಪೊಲೀಸರು ಮುಂದೆ ಇಷ್ಟನ್ನು ಹೊರತುಪಡಿಸಿ ಬೇರೆ ಏನು ಹೇಳಿರುವುದಿಲ್ಲ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

27.ನಂತರ ಚಾಸಾ 2 ಈತನು ಸಾತನೂರಿಗೆ ಹೋಗಿರುತ್ತಾನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

28. ಸದರಿ ಗಲಾಟೆಯನ್ನು ನಾನು, ಚಾಸಾ 5 ಮತ್ತು ಇತರರು ಕೂಡಿ ಬಿಡಿಸಿರುತ್ತೇವೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

29. ಸದರಿ ಗಲಾಟೆಯಲ್ಲಿ ಆರೋಪಿತರೆಲ್ಲರೂ ಚಾಸಾ 1 ಮತ್ತು 2 ಇವರಿಗೆ ಅವಾಚ್ಯ ಶಬ್ದದಿಂದ ಬೈದಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂಬುವುದು ಸರಿಯಲ್ಲ.

30.ಅದೇ ಪ್ರಕಾರ ಆರೋಪಿತರು ಚಾಸಾ 1 ಮತುತ 2 ಇವರಿಗೆ ಸಾಯಿಸದೇ ಬಿಡುವುದಿಲ್ಲ ಎಂದು ಪ್ರಾಣದ ಬೆದರಿಕೆ ಹಾಕಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂಬುವುದು ಸರಿಯಲ್ಲ.

31. ಸದರಿ ಆರೋಪಿತರು ಚಾಸಾ 1 ಮತ್ತು 2 ಇವರಿಗೆ ಲಂಬಾಣಿ ಕೀಳು ಜಾತಿಯವರು ಇದ್ದು, ಊರು ಬಿಟ್ಟು ಹೋಗಬೇಕು ಎಂದು ಬೈದು ಅವಮಾನ ಪಡಿಸಿರುತ್ತಾರೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂಬುವುದು ಸರಿಯಲ್ಲ.

32. ಸದರಿ ಮೇಲೆ ಸೂಚಿಸಿದ ವಿಚಾರವನ್ನು ನಾನು ಪೊಲೀಸರಿಗೆ ತಿಳಿಸಿರುತ್ತೇನೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂಬುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಕೆಸಿಎಂ., ವಕೀಲರಿಂದ 2 ಮತ್ತು 3ನೇ ಆರೋಪಿಗಳ ಪರವಾಗಿಃಆರೋಪಿ ಪರ ವಕೀಲರು ಕೂಗಿಸಲಾಯಿತು. ಗೈರು ಹಾಜರಿರುತ್ತಾರೆ. ಯಾವುದೇ ಸಕಾರಣವಿಲ್ಲದ್ದರಿಂದ ಮತ್ತು ವಿನೋದ್ ಕುಮಾರ್ ವರ್ಸಸ್ ಸ್ಟೇಟ್ ಆಫ್ ಪಂಜಾಬ್ ಪ್ರಕರಣದಲ್ಲಿ</u>

<u>ಮಾನ್ಯ ಸರ್ವೋಚ್ಚ ನ್ಯಾಯಾಲಯ ವಿಚಾರಣೆ ಮತ್ತು ಪಾಟೀ ಸವಾಲುಗಳನ್ನು ಒಂದೇ ದಿನದಂದು ಮಾಡಬೇಕೆಂದು ನಿರ್ದೇಶನವಿರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.</u>

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.